# ಪ್ರಬೋಧ್ ಎನ್ನುವ ಹಾಕಿ ಪ್ರತಿಭೆ

■ ಗರುಡ



ಚುರುಕಿನ ಆಟ, ತಂತ್ರದಲ್ಲಿ ಪರಿಣತಿ ಹಾಗೂ ಎದುರಾಳಿಗಳನ್ನು ಬೆಚ್ಚಿಸುವಂಥ ವೇಗವು ಪ್ರಬೋಧ್ ಟಿರ್ಕಿ ಆಟದ ವಿಶೇಷ. ಭಾರತ ಹಾಕಿ ಕ್ರೀಡೆ ಕಂಡ ಪ್ರತಿಭಾವಂತ ಆಟಗಾರರಲ್ಲಿ ಇವರೂ ಒಬ್ಬರು. ಆದರೆ ಸಿಕ್ಕ ಪ್ರಚಾರ ಮಾತ್ರ ತೀರ ಕಡಿಮೆ. ಹೀಗೆ ಆಗಲು ಕಾರಣ ಶುದ್ಧ ಹಿಂದಿ ಹಾಗೂ ಆಂಗ್ಲ ಭಾಷೆಯ ಜ್ಞಾನ ಕಡಿಮೆ ಎನ್ನುವುದು. ಮಾಧ್ಯಮದವರಿಗೆ ಆಕರ್ಷಕವಾಗಿ ಕಾಣದ ಒರಟು ಮುಖದ ಈ ಹುಡುಗನಿಗೆ ಗ್ಲಾಮರ್ ಹೊಳಪಿಲ್ಲ. ಆದ್ದರಿಂದಲೇ ಹಾಕಿ ಆಟದ ಅಂಗಳದಲ್ಲಿ ಮಿಂಚುವ ಮೂಲಕ ಮಾತ್ರ ಪ್ರಬೋಧ್ ಪ್ರಭೆ ಪ್ರಕಾಶಮಾನವಾಗಿದ್ದು.

ಪ್ರಚಾರ ಬಯಸದ ಮುಗ್ಧ ಪ್ರಬೋಧ್ ತನ್ನ ಹಿರಿಯಣ್ಣ ಇಗ್ನೇಸ್ ಟಿರ್ಕಿಯಂತೆಯೇ ಮಾತು ಕಡಿಮೆ ಅಭ್ಯಾಸ ಹಾಗೂ ಆಟ ಜಾಸ್ತಿ ಎನ್ನುವ ನಿಯಮ ಪಾಲಿಸಿಕೊಂಡು ಬಂದಿದ್ದಾರೆ. ಕೆಲವೇ ವರ್ಷಗಳ ಹಿಂದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾಣಿಸಿಕೊಂಡ ಸಂದೀಪ್ ಸಿಂಗ್ ಪಡೆದ ಪ್ರಚಾರ ಖಂಡಿತವಾಗಿಯೂ ಪ್ರಬೋಧ್‌ಗೆ ಸಿಗಲಿಲ್ಲ. ಆದರೆ ಭಾರತ ತಂಡವು ದೊಡ್ಡ ಟೂರ್ನಿಗಳಲ್ಲಿ ಒಂದಿಷ್ಟು ಪ್ರಭಾವಿ ಎನಿಸುವಂತೆ ಮಾಡಿದ್ದೇ ಪ್ರಬೋಧ್ ಅವರಂಥ ಆಟಗಾರರು.

ಅಣ್ಣ ಇಗ್ನೇಸ್ ರೀತಿಯಲ್ಲಿಯೇ ರಾಷ್ಟ್ರೀಯ ತಂಡದ ನಾಯಕತ್ವ ಪಡೆದಾಗ ಕೂಡ ಪ್ರಬೋಧ್ ಆಡಿದ ಮಾತು ಅಲ್ಪ. ತಂಡಕ್ಕೆ ತನ್ನಿಂದೇನು ಕೊಡುಗೆ ಸಾಧ್ಯವೆಂದು ಮಾತ್ರ ಯೋಚಿಸಿದವರು. ಪತ್ರಕರ್ತರ ಹತ್ತು ಪದಗಳ ಪ್ರಶ್ನೆಗೆ ಹೌದು–ಇಲ್ಲ ಎಂದು ಮಾತ್ರ ಉತ್ತರ ನೀಡುತ್ತಾ ಬಂದವರು. ತಂಡವು ಕೆಲವು ಪಂದ್ಯಗಳಲ್ಲಿ ವಿಫಲವಾದಾಗಲೂ ತಮ್ಮ ಆಟಗಾರರನ್ನು ದೂರದಂಥ ಸಭ್ಯ ನಾಯಕ ಎನಿಸಿದ್ದರು. ಆದರೆ ಅವರ ಇಂಥ ಅಲ್ಪನುಡಿಯೇ ಅವರು ಗ್ಲಾಮರ್ ಇಲ್ಲದ ಆಟಗಾರರಾಗುವಂತೆ ಮಾಡಿತು.

ಅರಳು ಹುರಿದಂತೆ ಮಾತನಾಡುವ ಕೆಲವು ಹೊಸ ಆಟಗಾರರು ಕೂಡ ತಾವೇ ಹಾಕಿ ತಾರೆಗಳು ಎನ್ನುವಂತೆ ಪೋಜು ಕೊಡುತ್ತಿರುವ ಈ ಕಾಲದಲ್ಲಿಯೂ ಪ್ರಬೋಧ್ ತಣ್ಣಗಾಗಿದ್ದಾರೆ. ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ದಕ್ಷಿಣ ಕೇಂದ್ರದಲ್ಲಿ ನಡೆಯುತ್ತಿರುವ ಭಾರತ ತಂಡದ ಶಿಬಿರಕ್ಕೆ ಬರುವ ಮಾಧ್ಯಮದವರಿಂದ ದೂರವೇ ಇದ್ದಾರೆ ಪ್ರಬೋಧ್. ಕ್ಯಾಮೆರಾಗಳು ಕಾಣುವ ಕಡೆಗೆ ಮುಖಮಾಡಿ ಅಭ್ಯಾಸ ಮಾಡುವ ಹೊಸ ಹುಡುಗರಂತಲ್ಲ ಗಡಸು ಮುಖದ ಈ ಬುಡಕಟ್ಟು ಯುವಕ.

'ಆಡುತ್ತೇನೆ–ಮಾತಾಡೋದು ಕಷ್ಟ'ವೆಂದು ಸ್ಪಷ್ಟವಾಗಿ ಹೇಳುವ ಪ್ರಬೋಧ್ ಆಟವೇ ಮಾತು. ಹಾಕಿ ಆಟವು ಟಿರ್ಕಿ ಕುಟುಂಬದ ಜೀವನಾಡಿ. ಪ್ರಬೋಧ್ ಅಣ್ಣಂದಿರಾದ ಇಗ್ನೇಸ್ ಹಾಗೂ ಅಂಸುಟಾ ಕೂಡ ಹಾಕಿ ಸ್ಟಿಕ್ ಹಿಡಿದು ಬದುಕು ಕಂಡುಕೊಂಡವರು. ವಿಶೇಷವೆಂದರೆ ಟಿರ್ಕಿ ಪರಿವಾರದ ಇಬ್ಬರು ಭಾರತ ತಂಡದ ನಾಯಕತ್ವದ ಶ್ರೇಯ ಪಡೆದಿದ್ದಾರೆ.

ಬಾಲ್ಯದಲ್ಲಿಯೇ ತನ್ನ ಸಹೋದರರಂತೆ ಸ್ಟಿಕ್ ಹಿಡಿದು ಅಂಗಳಕ್ಕಿಳಿದ ಪ್ರಬೋಧ್ ಅವರನ್ನು ಒಡಿಶಾದ 'ಹಾಕಿ ರತ್ನಮಣಿ' ಎಂದೇ ಕರೆಯಲಾಗುತ್ತದೆ. 2007ರಲ್ಲಿ ಏಷ್ಯಾ ಕಪ್‌ನಲ್ಲಿ ಭಾರತವು ಸ್ವರ್ಣ ಸಂಭ್ರಮ ಪಡೆಯಲು ಕಾರಣರಾದ ಆಟಗಾರರಲ್ಲಿ ಇವರೂ ಒಬ್ಬರು. ದೆಹಲಿ ಕಾಮನ್‌ವೆಲ್ತ್ ಕೂಟದಲ್ಲಿ ಹಾಕಿ ರಜತ ಪದಕ ಗೆದ್ದ ತಂಡದಲ್ಲಿಯೂ ಪ್ರಬೋಧ್ ಆಡಿದ ಆಟ ಮೆಚ್ಚುವಂಥದು.

ಮೂರು ವರ್ಷಗಳ ಹಿಂದೆ ಸುಲ್ತಾನ್ ಅಜ್ಲನ್ ಷಾ ಕಪ್ ಹಾಗೂ ಚಾಂಪಿಯನ್ಸ್ ಚಾಲೆಂಜ್‌ನಲ್ಲಿ ಕಂಚಿಗೆ ಭಾರತ ಸಮಾಧಾನ ಪಟ್ಟಿತ್ತು. ಆಗ ಪ್ರಬೋಧ್ ತಂಡಕ್ಕೆ ಹೊಸಬ. ಆದರೂ ತನ್ನ ಸತ್ವವುಳ್ಳ ಆಟದಿಂದ ಅನುಭವಿಗಳೂ ಬೆರಗಾಗುವಂತೆ ಮಾಡಿದ್ದರು. ಈಗ ಆಟದಲ್ಲಿ ಇನ್ನಷ್ಟು ಸುಧಾರಣೆ ಆಗಿದೆ. ಪಂದ್ಯದ ಪೂರ್ಣ ಅವಧಿಯ ಆಟವಾಡುವಂಥ ದೈಹಿಕ ಸಾಮರ್ಥ್ಯ ಹೊಂದಿರುವ ಪ್ರಬೋಧ್ 'ಹಾಕಿ ಆಟವೇ ನನ್ನ ಜೀವನ; ಇದರ ಹೊರತಾಗಿ ಬೇರೆ ಬದುಕಿಲ್ಲ' ಎನ್ನುತ್ತಾರೆ.

ಹೌದು; ಟಿರ್ಕಿ ಕುಟುಂಬದೆಲ್ಲರಿಗೂ ಹಾಕಿ ಆಟವೇ ಬದುಕಿನ ಆಸರೆ. ಆದ್ದರಿಂದಲೇ ಪ್ರಬೋಧ್ ಆಟದಲ್ಲಿ ವೃತ್ತಿಪರತೆ ಕಾಣಿಸುತ್ತದೆ. ಶಿಸ್ತು ಹಾಗೂ ಸಹನೆಯಿಂದಲೂ ವಿಶಿಷ್ಟವಾಗಿ ನಿಲ್ಲುತ್ತಾರೆ ಈ ಆಟಗಾರ.



